# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.186-2017** **ಪಿ . ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕಾಶೀವಿಶ್ವನಾಥ್<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-09-2022. |

**ಪಾಟೀ ಸವಾಲುಃ ಶ್ರೀ ಎಸ್.ವಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ ನನಗೆ 1 ಎಕರೆ 33 ಗುಂಟೆ ಜಮೀನು ಇರುತ್ತದೆ. ನನಗೆ 1 ಎಕರೆ 33 ಗುಂಟೆ ಜಮೀನು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಒಂದು ವೇಳೆ ಕೇಳಿದಲ್ಲಿ ಹಾಜರುಪಡಿಸಲು ಸಿದ್ಧನಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಜಮೀನು ವೀರದೇವನಪುರದಲ್ಲಿ ಇರುತ್ತದೆ. ಸದರಿ ಜಮೀನು ಖುಷ್ಕಿ ಜಮೀನು ಆಗಿರುತ್ತದೆ. ಸದರಿ ಜಮೀನಿನಲ್ಲಿ ನಾನು ರಾಗಿ ಮತ್ತು ಅಲಸಂದೆಯನ್ನು ಬೆಯುತ್ತಿದ್ದು, ಈಗ್ಗೆ 2 ವರ್ಷಗಳಿಂದ ಜಮೀನಿನಲ್ಲಿ ನೀರು ತುಂಬಿರುವುದರಿಂದ ಯಾವುದೇ ಬೆಳೆಯನ್ನು ಬೆಯುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ಸ್ವಯಾರ್ಜಿತ ಜಮೀನು ಆಗಿದ್ದು, ಸುಮಾರು 25 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ. ಸದರಿ ಜಮೀನಿಂದ ನನ್ನ ಖರ್ಚು ಕಳೆದು ರೂ.20,000/- ಆದಾಯ ಬರುತ್ತಿತ್ತು.

2. ನಾನು 5 ವರ್ಷದ ಹಿಂದೆ ನಂಜನಗೂಡಿನ ಏರ್‌ಟೆಲ್ ಡಿಸ್ಟ್ರಿಬ್ಯೂಟರ್ ಆಗಿದ್ದು, ಜೊತೆಗೆ ಸಿಮೆಂಟ್ ವ್ಯಾಪಾರವನ್ನು ಮಾಡುತ್ತಿದ್ದೆನು. ನಾನು ಸಿಮೆಂಟ್ ವ್ಯಾಪಾರ ಮಾಡಲು ನಾನು ಪರವಾನಗಿಯನ್ನು ಪಡೆದುಕೊಂಡಿದ್ದೆನು. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ವ್ಯವಸಾಯ, ಏರ್‌ಟೆಲ್ ಡಿಸ್ಟ್ರಿಬ್ಯೂಟರ್ ಮತ್ತು ಸಿಮೆಂಟ್ ವ್ಯವಹಾರವನ್ನು ಮಾಡುತ್ತಿದ್ದು, ಅದರ ಜೊತೆಗೆ ನನಗೆ ಬಾಡಿಗೆಯಿಂದ ಆದಾಯ ಬರುತ್ತಿತ್ತು.

3. ನಾನು ಒಂದು ಮನೆ ಮತ್ತು 3 ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ನೀಡಿರುತ್ತೆನೆ. ನಾನು 2018 ರವರೆಗೆ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೆನು. ಒಂದು ವೇಳೆ ನ್ಯಾಯಾಲಯ ಆಪೇಕ್ಷಿದ ಪಕ್ಷದಲ್ಲಿ ಅದನ್ನು ಹಾಜರುಪಡಿಸಲು ಸಿದ್ದನಿರುತ್ತೇನೆ. ನನಗೆ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ನನ್ನ ವ್ಯವಹಾರದ ಬಗ್ಗೆ ಸಂಪೂರ್ಣವಾಗಿ ನಮೂದು ಮಾಡಿರುತ್ತೇನೆ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಸದರಿ ವಿಚಾರವನ್ನು ಹೇಳುವ ಅವಶ್ಯಕತೆ ಇರುವುದಿಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನಂಜನಗೂಡಿನ ಆರ್.ಪಿ ರಸ್ತೆಯ 16 ನೇ ಕ್ರಾಸ್ ನಲ್ಲಿ ಮನೆ ಇದ್ದು,6 ನೇ ಕ್ರಾಸ್ ನಲ್ಲಿ ಅಂಗಡಿ ಮಳಿಗೆಗಳು ಇರುತ್ತವೆ. ಸದರಿ ಸ್ವತ್ತುಗಳನ್ನು 2010–11 ನೇ ಸಾಲಿನಲ್ಲಿ ಖರಿದಿ ಮಾಡಿರಬಹುದು. ನಾನು ದಾವಾ ಸಲ್ಲಿಸುವಾಗ ದಾವಾ ಶೀರ್ಷಿಕೆಯಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾಸವಿದ್ದು ಈಗ ಹಾಲಿ ಆರ್.ಪಿ ರಸ್ತೆಯ 16 ನೇ ಕ್ರಾಸ್ ನಲ್ಲಿ ವಾಸವಿರುತ್ತೇನೆ.

4. ನಾನು ನನ್ನ ಮುಖ್ಯ ವಿಚಾರಣೆಯ 2 ನೇ ಖಂಡಿಕೆಯಲ್ಲಿ ಒಪ್ಪಂದದ ಕರಾರು ಆಗುವ ಸಮಯದಲ್ಲಿ ನಾನು 2918, 6 ನೇ ಕ್ರಾಸ್ ಆರ್.ಪಿ ರಸ್ತೆಯಲ್ಲಿ ವಾಸವಾಗಿದ್ದೆ, ಈಗ ಹಾಲಿ ದಾವಾ ಶಿರೋನಾಮೆ ವಿಳಾಸದಲ್ಲಿ ವಾಸವಾಗಿರುತ್ತೇನೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ಹಾಲಿ ನಾನು ಆರ್.ಪಿ ರಸ್ತೆಯ 16 ನೇ ಕ್ರಾಸ್ ನಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ಆರ್.ಪಿ ರಸ್ತೆಯ 6 ನೇ ಕ್ರಾಸ್ ನಲ್ಲಿರುವುದು ನನ್ನ ಸ್ವಂತ ಮನೆ. ಆರ್.ಪಿ ರಸ್ತೆಯ 6 ನೇ ಕ್ರಾಸ್ ನಲ್ಲಿ ನನಗೆ ಸೇರಿದ ಅಂಗಡಿ ಮಳಿಗೆ ಮತ್ತು ಮನೆ ಇರುತ್ತದೆ. ನಾನು ಅಲ್ಲಿ ಚೀಟಿ ಮತ್ತು ಫೈನಾನ್ಸ್ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ವ್ಯವಸಾಯದಿಂದ ಸಾಕಷ್ಟು ಆದಾಯ ಇರಲಿಲ್ಲ, ಆಗಾಗಿ ನಾನು ಫೈನಾನ್ಸ್ ವ್ಯವಹಾರದಿಂದ ಬಂದಂತಹ ಆದಾಯದಿಂದ ಸ್ವತ್ತುಗಳನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಿಮೆಂಟ್ ಮತ್ತು ಏರ್‌ಟೆಲ್ ವ್ಯವಹಾರ ಮಾಡುತ್ತಿದ್ದೆನು. ನನಗೆ ಸಿಮೆಂಟ್ ಮತ್ತು ಏರ್‌ಟೆಲ್ ವ್ಯವಹಾರದಿಂದ ತಿಂಗಳಿಗೆ ರೂ.50,000/– ಆದಾಯ ಇತ್ತು. ನಾನು ಹೇಳುವಂತೆ ಸಿಮೆಂಟ್ ಮತ್ತು ಏರ್‌ಟೆಲ್ ವ್ಯವಹಾರದಿಂದ ಯಾವುದೇ ಆದಾಯ ಬರುತ್ತಿರಲಿಲ್ಲ, ಒಂದು ವೇಳೆ ನಾನು ಹೇಳುವಂತೆ ಆದಾಯ ಇದ್ದ ಪಕ್ಷದಲ್ಲಿ ಸದರಿ ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಈಗಲೂ ಸಹ ಸದರಿ ದಾಖಲೆಯನ್ನು ಹಾಜರುಪಡಿಸಲು ಸಿದ್ಧನಿರುತ್ತೇನೆ ಎಂದು ನುಡಿಯುತ್ತಾರೆ.

5. ಪ್ರತಿವಾದಿಗಳು ಅಶ್ವಿನಿ ರವರ ವಿವಾಹದ ಖರ್ಚಿಗಾಗಿ ದಾವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ನನ್ನಿಂದ ಕ್ರಯದ ಮುಂಗಡವಾಗಿ ರೂ2,00,000/- ಗಳನ್ನು ಪಡೆದು ಯಾವುದೇ ಕ್ರಯ ಪತ್ರವನ್ನು ಬರೆದುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಪ್ರತಿವಾದಿಗಳು ನೋಂದಣಾಧಿಕಾರಿಗಳ ಸಮಕ್ಷಮವೇ ನನಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ ಪ್ರತಿವಾದಿಗಳು ನೋಂದಣಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಹೊಂದಿಸಿಕೊಂಡು ಬಂದು ರಿಜಿಸ್ಟರ್ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದರು ಹಾಗೂ ಈ ಸಂಬಂಧ ನಾನು ಅನೇಕ ಭಾರಿ ಪ್ರತಿವಾದಿಗಳನ್ನು ಭೇಟಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರಿನ ಅವಧಿ ಮುಗಿದ ನಂತರ ಸುಮಾರು 5-6 ಭಾರಿ ನಾನು ಪ್ರತಿವಾದಿಗಳ ಮನೆ ಬಳಿ ಹೋಗಿರುತ್ತೇನೆ. ಅಗತ್ಯವಿರುವ ದಾಖಲೆಗಳು ಎಂದರೆ ಪಹಣಿ, ಸ್ಕೆಚ್, ಫಾರಂ ನಂ.6 ಮತ್ತು ಇನ್ನಿತರೆ ದಾಖಲೆಗಳು ಬರುತ್ತವೆ. ಅಗತ್ಯ ದಾಖಲೆಗಳನ್ನು ತಂದು ಹಾಜರುಪಡಿಸುವಂತೆ ನಾನು ಪ್ರತಿವಾದಿಗಳಿಗೆ ನೋಟಿಸ್ ನೀಡಿರುವುದಿಲ್ಲ. ನಾನು ಬಾಕಿ ಹಣ ರೂ.50,000/- ಗಳನ್ನು ಪಾವತಿ ಮಾಡಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ಸಿದ್ದನಿದ್ದೇನು ಆದರೆ ಪ್ರತಿವಾದಿಗಳು ದಾಖಲೆಗಳನ್ನು ಒದಗಿಸಲಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ದಿ.21-02-2017 ರಂದು ನನ್ನ ವಕೀಲರ ಮುಖೇನ ಪ್ರತಿವಾದಿಗಳಿಗೆ ತಿಳುವಳಿಕೆ ನೀಡಿಸಿರುತ್ತೇನೆ. ನಾನು ತಿಳುವಳಿಕೆ ನೀಡುವವರೆವಿಗೆ ಪ್ರತಿವಾದಿಗಳನ್ನು ಕ್ರಯ ಪತ್ರ ನೋಂದಣಿ ಮಾಡಿಕೊಡುವಂತೆ ಒತ್ತಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ನೋಟಿಸ್ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಇತರೆ ಪ್ರತಿವಾದಿಗಳಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮನೆಗೆ ಹೋಗಿ ಸದರಿ ವಿಚಾರವನ್ನು 1 ನೇ ಪ್ರತಿವಾದಿ ಹೆಂಡತಿ ಮಕ್ಕಳಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಯದ ಮಾತುಕತೆಗೆ 1 ನೇ ಪ್ರತಿವಾದಿ ಮಾತ್ರ ಬಂದಿದ್ದು, ಆದರೆ ಕ್ರಯದ ಕರಾರಿನ ನೋಂದಣಿ ವೇಳೆ ಪ್ರತಿವಾದಿಗಳು ಎಲ್ಲರೂ ನೋಂದಣಾಧಿಕಾರಿಗಳ ಕಚೇರಿಗೆ ಬಂದಿದ್ದರು.

7. ನಾನು ಕ್ರಯದ ಒಪ್ಪದಂದ ದಿನದಿಂದಲೂ ಯಾವಾಗಲೂ ಉಳಿಕೆ ಕ್ರಯದ ಮೊಬಲಗು ರೂ.50,000/- ಗಳನ್ನು ಪ್ರತಿವಾದಿಗೆ ಪಾವತಿ ಮಾಡಿ ನನ್ನ ಖರ್ಚಿನಲ್ಲಿ

ಕ್ರಮವಾದ ಕ್ರಯ ಪತ್ರವನ್ನು ರಿಜಿಸ್ಟರ್ ಮಾಡಿಸಿಕೊಳ್ಳು ಯಾವಾಗಲೂ ಮತ್ತು ಈಗಲೂ ಸಿದ್ದನಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. 2013 ರಲ್ಲಿ ಗುಂಟೆಯೊಂದಕ್ಕೆ ಜಮೀನಿನ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಖುಷ್ಕಿ ಜಮೀನು. ಸಾಕ್ಷಿಯು ಮುಂದುವರೆದು ಬೀರವಾಳು ನಾಲೆಯಲ್ಲಿ ನೀರು ಬಂದರೆ 5–6 ವರ್ಷಕ್ಕೊಮ್ಮೆ ನೀರು ಬರುತ್ತದ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**